# ಕರ್ನಾಟಕ ವಿಧಾನ ಪರಿಷತ್ತು

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿ ರವರು ನಿಯಮ 72 ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಉತ್ತರ.**

**ವಿಷಯ:** ರಾಜ್ಯದಲ್ಲಿ ನರ್ಸಿಂಗ್ ಕಾಲೇಜುಗಳಲ್ಲಿ ಜಿ.ಎನ್.ಎಮ್ ಕೋರ್ಸ್‌ಗಳಿಗೆ ಅತಿಯಾದ ಬೇಡಿಕೆಗಳಿದ್ದರೆ ಹೊಸದಾಗಿ ಜಿ.ಎನ್.ಎಮ್ ಕೋರ್ಸಗಳನ್ನು ಪ್ರಾರಂಭಿಸಲು ಅನುಮತಿ ನೀಡದಿರುವ ಕುರಿತು ಪ್ರಸ್ತಾಪಿಸಲಾಗಿದೆ.

**ಉತ್ತರ:** ಹೊಸದಾಗಿ ಜಿ.ಎನ್.ಎಮ್ ಕೋರ್ಸ್‌ಗಳನ್ನು ಪ್ರಾರಂಭಿಸಲು ಹೆಚ್ಚಿನ ಬೇಡಿಕೆ ಇರುತ್ತದೆ. ಯಾವುದೇ ನರ್ಸಿಂಗ್ ಕೋರ್ಸುಗಳ ಪ್ರವೇಶಾತಿ ಪ್ರಕ್ರಿಯೆಗೆ ಸಂಬಂಧಿಸಿದಂತೆ Indian Nursing Council ರವರು ಹೊರಡಿಸಿರುವ ಮಾರ್ಗಸೂಚಿಯನ್ನು ಅನುಸರಿಸಲಾಗುತ್ತಿದೆ. ಅದರಂತೆ INC ಪತ್ರ ಸಂಖ್ಯೆ:1-6/2018-INC, ದಿನಾಂಕ:20.04.2018 ರಲ್ಲಿ ಯಾವುದೇ ನರ್ಸಿಂಗ್ ಶಾಲೆಗಳನ್ನು ಪ್ರಾರಂಭಿಸಲು ಲಭ್ಯವಿರಬಹುದಾದ Teaching Block, Laboratories, Multipurpose Hall, Library, Office requirement, Hostel Block, Clinical Facilities ಮತ್ತಿತರೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಹೊಂದಬೇಕಾಗಿರುವುದು ಕಡ್ಡಾಯವಾಗಿರುತ್ತದೆ.

ಆದರೆ ಇತ್ತೀಚಿನ ದಿನಗಳಲ್ಲಿ ನರ್ಸಿಂಗ್ ಕೋರ್ಸಗಳ ಪ್ರವೇಶಾತಿಗೆ ಅನುಮತಿ ಕೋರಿ ಸರ್ಕಾರಕ್ಕೆ ಸಲ್ಲಿಸುತ್ತಿರುವ ಅರ್ಜಿಗಳನ್ನು ಅವಲೋಕಿಸಿದಾಗ INC ನಿಗಧಿಪಡಿಸಿದ ಮಾರ್ಗಸೂಚಿಗಳಲ್ಲಿನ ಮಾನದಂಡಗಳನ್ನು ಪರಿಪೂರ್ಣವಾಗಿ ಪಾಲಿಸದೇ ಸರ್ಕಾರದ ಅನುಮತಿಯನ್ನು ಕೋರುತ್ತಿರುವುದು ಕಂಡುಬರುತ್ತದೆ.

ಹೊಸ ನರ್ಸಿಂಗ್ ಶಾಲೆಗಳಿಗೆ (GNM) ಅನುಮತಿ ನೀಡುವ ಸಂದರ್ಭದಲ್ಲಿ INC ಯ ಮಾರ್ಗಸೂಚಿಗಳನ್ನು ಅನುಸರಿಸುತ್ತಿರುವುರಿಂದ ನರ್ಸಿಂಗ್ ಶಾಲೆ ಮತ್ತು ನರ್ಸಿಂಗ್ ಕಾಲೇಜುಗಳಿಗೆ INC ಯ ಮಾರ್ಗಸೂಚಿಗಳು ಬಹುತೇಕ ಸಾಮ್ಯತೆ ಹೊಂದಿರುತ್ತವೆ. ಆದುದರಿಂದ ಈಗಾಗಲೇ ಹೊಸ ನರ್ಸಿಂಗ್ ಕಾಲೇಜುಗಳಿಗೆ ಅನುಮತಿ ನೀಡುವ ಪ್ರಕ್ರಿಯೆಯ ಸುಧಾರಣೆಗೆ ಸಂಬಂಧಪಟ್ಟಂತೆ ರಚಿಸಿರುವ ವಿಶೇಷ ಜಂಟಿ ಸದನ ಸಮಿತಿಯು ನೀಡಬಹುದಾದ ವರದಿಯಲ್ಲಿನ ಶಿಫಾರಸ್ಸುಗಳನ್ನುGNM ಶಾಲೆಗಳಿಗೂ ಸಹ ಅನ್ವಯಿಸುವುದು ಆಡಳಿತಾತ್ಮಕ ಹಿತದೃಷ್ಟಿಯಿಂದ ಸೂಕ್ತವೆಂದು ಭಾವಿಸಿ, ರಾಜ್ಯದಲ್ಲಿ ಯಾವುದೇ ಹೊಸ ನರ್ಸಿಂಗ್ ಶಾಲೆಗಳಿಗೆ (GNM) ಹೊಸದಾಗಿ ನೀಡುವ ಪ್ರಕ್ರಿಯೆಗೆ ಸರ್ಕಾರದ ಮುಂದಿನ ಆದೇಶದವರೆಗೂ ತಡೆಹಿಡಿಯಲು ನಿರ್ಣಯಿಸಿ, ಅದರಂತೆ, ಸರ್ಕಾರದ ಆದೇಶ ಸಂಖ್ಯೆ:ಎಂಇಡಿ 211 ಎಂಎಸ್‌ಎಫ್ 2022. ದಿನಾಂಕ:20.05.2022 ರಲ್ಲಿ ರಾಜ್ಯದಲ್ಲಿ ಯಾವುದೇ ನರ್ಸಿಂಗ್ ಶಾಲೆಗಳಿಗೆ (GNM) ಹೊಸದಾಗಿ ಪ್ರಾರಂಭಿಸುವ /ಪ್ರವೇಶ ಮಿತಿ ಹೆಚ್ಚಿಸುವ ಮತ್ತು ವಿಳಾಸ ಬದಲಾವಣೆಗಳ ಪ್ರಕರಣಗಳಿಗೆ ಅನುಮತಿ ನೀಡುವ ಪ್ರಕ್ರಿಯೆಯನ್ನು ಸರ್ಕಾರದ ಮುಂದಿನ ಆದೇಶದವರಗೆ ತಡೆಹಿಡಿಯಲಾಗಿದೆ.

**ಸಂಖ್ಯೆ**: ಎಂಇಡಿ 335 ಎಂಎಂಸಿ 2023

**(ಡಾ. ಶರಣಪ್ರಕಾಶ್ ಆರ್ ಪಾಟೀಲ್)**
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು